**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ ಇವರು ಪ್ರಸ್ತಾಪಿಸಿರುವ ಶೂನ್ಯ ವೇಳೆ ಕ್ರಮ ಸಂಖ್ಯೆ:14ಕ್ಕೆ ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಉತ್ತರ :**

**ಪ್ರಶ್ನೆ:**

ದಿನಾಂಕ:09.08.2025 ಹೊಸ ಪ್ರಜಾವಾಣಿ ದಿನ ಪತ್ರಿಕೆಯಲ್ಲಿ ಪ್ರಕಟವಾದ ವರದಿಯನ್ನು ಉಲ್ಲೇಖಿಸುತ್ತಾ, ಹದಗೆಟ್ಟ ಕೊಪ್ಪಳ ಕೇಂದ್ರೀಯ ವಿದ್ಯಾಲಯ ರಸ್ತೆ, ನೂರಾರು ಸಂಖ್ಯೆಯಲ್ಲಿ ಮಕ್ಕಳು ಓಡಾಡುತ್ತಿದ್ದರೂ ಇಲ್ಲ ಬಸ್ ಸೌಲಭ್ಯ.

ಜಿಲ್ಲಾಕೇಂದ್ರ ಹಾಗೂ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳಿಂದಲೂ ಕೇಂದ್ರೀಯ ವಿದ್ಯಾರ್ಥಿಗಳಿಗೆ ನಿತ್ಯ ಅಂದಾಜು 400ಕ್ಕಿಂತಲೂ ಹೆಚ್ಚು ಮಕ್ಕಳು ಹಾಗೂ 40ಕ್ಕಿಂತಲೂ ಹೆಚ್ಚು ಆಟೋರಿಕ್ಷಾಗಳು ಓಡಾಡುತ್ತಿವೆ. ಅಲ್ಲಿಗೆ ತೆರಳಲು ಎಲ್ಲಿಂದಲೂ ಸರ್ಕಾರಿ ಬಸ್‌ಗಳ ಸೌಲಭ್ಯ ಇಲ್ಲದ ಕಾರಣ ಮಕ್ಕಳನ್ನು ಕಳುಹಿಸಲು ಪೋಷಕರು ಮಾಸಿಕ ಸಾವಿರಾರು ರೂಪಾಯಿ ಖರ್ಚು ಮಾಡಬೇಕಾಗಿದೆ. ಜಿಲ್ಲಾ ಕೇಂದ್ರದಿಂದ ತೆರಳುವವರು ರಾಷ್ಟ್ರೀಯ ಹೆದ್ದಾರಿಯನ್ನು ದಾಟಿಕೊಂಡು ಹೋಗಬೇಕಾಗಿದೆ. ಆದ್ದರಿಂದ ಅಲ್ಲಿ ಫ್ಲೈ ಓವರ್ ನಿರ್ಮಿಸಬೇಕು ಅಥವಾ ಅಂಡರ್ ಪಾಸ್ ಮಾಡಿಕೊಡಬೇಕು ಎನ್ನುವುದು ಪೋಷಕರ ಅನೇಕ ವರ್ಷಗಳ ಬೇಡಿಕೆಯಾಗಿದ್ದರೂ ಸ್ಪಂದನೆ ಲಭಿಸಿಲ್ಲ ಎನ್ನುವುದು ಪೋಷಕರ ದೂರು.

ಕೇಂದ್ರೀಯ ಬಸ್ ನಿಲ್ದಾಣದಿಂದ ವಿದ್ಯಾಲಯ ಸುಮಾರು 8 ಕಿ.ಮೀ.ನಷ್ಟು ದೂರವಾಗುತ್ತದೆ. ರಾಷ್ಟ್ರೀಯ ಹೆದ್ದಾರಿಯಿಂದ ಬಹದ್ದೂರ್ ಬಂಡಿಗೆ ಹೋಗುವ ಒಂದಷ್ಟು ಮಾರ್ಗ, ಇನ್ನುಳಿದ ವಿದ್ಯಾಲಯ ಹೋಗುವ ಮಾರ್ಗದಲ್ಲಿ ಇರುವ ಒಂದು ವಾಹನ ಓಡಾಡುವಷ್ಟು ಜಾಗದಲ್ಲಿ ಎಲ್ಲೆಂದರಲ್ಲಿ ಆಳವಾಗಿ ಗುಂಡಿಗಳು ಬಿದ್ದಿವೆ. ಮಳೆಗಾಲ ಬಂದರಂತೂ ಎಲ್ಲಿ ಗುಂಡಿಗಳು ಇವೆ ಎನ್ನುವುದು ಕೂಡ ನಿರ್ದಿಷ್ಟವಾಗಿ ಗೊತ್ತಾಗುವುದಿಲ್ಲ. ಈ ರಸ್ತೆಯಲ್ಲಿ ಹೋಗುವಾಗ ಅನೇಕರು ಬಿದ್ದು ಗಾಯಗೊಂಡ ಉದಾಹರಣೆಗಳು ಕೂಡ ಸಾಕಷ್ಟಿವೆ. ಆದ್ದರಿಂದ ರಾಷ್ಟ್ರೀಯ ಹೆದ್ದಾರಿಯಿಂದ ಕೇಂದ್ರೀಯ ವಿದ್ಯಾಲಯದ ತನಕ ಚತುಷ್ಪಥ ರಸ್ತೆ ಮಾಡಿಕೊಡಬೇಕು ಎನ್ನುವುದು ಪೋಷಕರ ಬೇಡಿಕೆಯಾಗಿದ್ದು, ಈ ಕುರಿತು ಇತ್ತೀಚಿಗೆ ಹಲವು ಪೋಷಕರು ಜಿಲ್ಲಾಧಿಕಾರಿ ಅವರನ್ನು ಭೇಟಿಯಾಗಿದ್ದಾರೆ. ಕನಿಷ್ಠ ಬಸ್ ಸೌಲಭ್ಯವನ್ನಾದರೂ ಕಲ್ಪಿಸಿದರೆ ಅನುಕೂಲವಾಗುತ್ತದೆ ಎನ್ನುವುದನ್ನು ಗಮನಕ್ಕೆ ತಂದಿದ್ದಾರೆ. ಇಲಾಖೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

**ಉತ್ತರ:**

ಕೊಪ್ಪಳ ದಿಂದ ಬಹದ್ದೂರ್ ಬಂಡಿಗೆ ಹೋಗುವ ರಸ್ತೆಯಲ್ಲಿ ಬರುವ ಸರಸ್ವತಿ ವಿದ್ಯಾಮಂದಿರದ ಹತ್ತಿರ ಇರುವ ಕ್ರಾಸ್‌ನಿಂದ ಕೇಂದ್ರಿಯ ವಿದ್ಯಾಲಯವು 1.5 ಕಿ.ಮೀ ಅಂತರದಲ್ಲಿದ್ದು, ಸದರಿ ಮಾರ್ಗದಲ್ಲಿ 18 ಸರತಿಗಳಲ್ಲಿ ನಿಗಮದ ಬಸ್‌ಗಳ ಸಂಚಾರ ಇರುತ್ತದೆ. ಕ್ರಾಸ್ ನಿಂದ ಕೇಂದ್ರಿಯ ವಿದ್ಯಾಲಯಕ್ಕೆ ಹೋಗುವ ಮಾರ್ಗದಲ್ಲಿ ಬಸ್ ಸಂಚಾರ ಮಾಡಿದಲ್ಲಿ ಎದುರಿನಿಂದ ವಾಹನಗಳು ಬಂದಲ್ಲಿ ವಾಹನಗಳು ದಾಟುವುದು ಕಷ್ಟಸಾಧ್ಯವಾಗಿದೆ. ದಿನ ಪತ್ರಿಕೆಯಲ್ಲಿ ತಿಳಿಸಿದಂತೆ ಒಂದು ವಾಹನ ಓಡಾಡುವಷ್ಟು ಜಾಗವಿದ್ದು, ಎಲ್ಲಿಂದರಲ್ಲಿ ಗುಂಡಿಗಳು ಬಿದ್ದಿರುತ್ತವೆ. ಈಗಾಗಲೇ ಕೇಂದ್ರಿಯ ವಿದ್ಯಾಲಯಕ್ಕೆ ಹೋಗುವ ರಸ್ತೆ ಅಭಿವೃದ್ಧಿಪಡಿಸುವಂತೆ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಕೊಪ್ಪಳ ಇವರು ದಿನಾಂಕ:16.07.2025 ರಂದು ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ, ಕೊಪ್ಪಳ ಇವರಿಗೆ ಪತ್ರ ಬರೆದಿರುತ್ತಾರೆ. ಮುಂದುವರೆದು ನಿಗಮದ ವತಿಯಿಂದ ಸದರಿ ರಸ್ತೆ ಅಭಿವೃದ್ಧಿಪಡಿಸಲು ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಕೊಪ್ಪಳ ಜಿಲ್ಲೆ ಇವರಿಗೆ ದಿನಾಂಕ:12.08.2025 ರಂದು ಪತ್ರ ಬರೆಯಲಾಗಿದ್ದು, ಲೋಕೋಪಯೋಗಿ ಇಲಾಖೆ/ ಜಿಲ್ಲಾಪಂಚಾಯತ್, ಕೊಪ್ಪಳ ಇವರಿಂದ ರಸ್ತೆ ದುರಸ್ತಿಯಾಗಿ ವಾಹನಗಳ ಸಂಚಾರಕ್ಕೆ ತಕ್ಕಂತೆ ಅಗಲೀಕರಣವಾಗಿ ಮೋಟರಬಲ್ ರಸ್ತೆ ನಿರ್ಮಾಣವಾದಲ್ಲಿ, ಅಗತ್ಯಕ್ಕೆ ತಕ್ಕಂತೆ ಆದ್ಯತೆಯ ಮೇರೆಗೆ ಪರಿಶೀಲಿಸಿ ನಿಗಮದ ಬಸ್ ಕಾರ್ಯಚರಣೆಗೆ ಕ್ರಮ ಜರುಗಿಸಲಾಗುವುದು.

ಸಂಖ್ಯೆ: ಟಿಡಿ 191 ಟಿಸಿಕ್ಯೂ 2025

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು